ಅನುಬಂಧ – 1

504(727) : ಶ್ರೀ ಅಭಯ ಪಾಟೀಲ್ (ಹಿರೇಬಾಗೇವಾಡಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಹತ್ತಿ ನೂಲಿನ ಗಿರಣಿಯು ಕಳೆದ ಎಷ್ಟು ವರ್ಷಗಳಿಂದ ಸ್ಥಗಿತಗೊಂಡಿದೆ, ಸ್ಥಗಿತಗೊಳ್ಳಲು ಕಾರಣವೇನು;

ಆ) ಈ ಮಿಲ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆ ಎಷ್ಟು? ಅವರಿಗೆ ಪೂರ್ತಿ ವೇತನ ನೀಡಲಾಗಿದೆಯೇ? ನೀಡದಿದ್ದಲ್ಲಿ ಬಾಕಿ ಇರುವ ವೇತನ ಎಷ್ಟು;

ಇ) ಕಾರ್ಮಿಕರಿಗೆ ಬಾಕಿ ವೇತನವನ್ನು ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಈ ಮಿಲ್ ನಷ್ಟಕ್ಕೊಳಗಾಗಿರುವುದೇ;

ಉ) ಹಾಗಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ದಿನಾಂಕ 5–1–1998 ರಿಂದ 31–3–2000 ಹಾಗೂ ದಿನಾಂಕ 2–6–2001 ರಿಂದ ಇಲ್ಲಿಯವರೆಗೆ ಸ್ಥಗಿತಗೊಂಡಿರುತ್ತದೆ. ಆರ್ಥಿಕ ಮುಗ್ಗಟ್ಟಿನಿಂದ ಸ್ಥಗಿತಗೊಂಡಿರುತ್ತದೆ.

ಆ) ಗಿರಣಿಯಲ್ಲಿ ಅಂದಾಜು 650 ಕಾರ್ಮಿಕರಿದ್ದು, ಸ್ಥಗಿತಗೊಂಡಾಗಿನಿಂದ ಇವರಿಗೆ ವೇತನ ನೀಡಿರುವುದಿಲ್ಲ. ಬಾಕಿ ಇರುವ ವೇತನ ಅಂದಾಜು ರೂ. 325.00 ಲಕ್ಷಗಳು.

ಇ) ಟಾಟಾ ಎಕನಾಮಿಕ್ ಕನ್ಸಲ್ಟೆನ್ಸಿ ಸಂಸ್ಥೆಯವರು ಗಿರಣಿಯ ಕಾರ್ಯನಿರ್ವಹಣೆಯ ಬಗ್ಗೆ ಅಧ್ಯಯನವನ್ನು ನಡೆಸಿ ಗಿರಣಿಯ ಆಧುನೀಕರಣ ಮತ್ತು ಪುನಶ್ಚೇತನಗೊಳಿಸುವ ಬಗ್ಗೆ ವರದಿ ನೀಡಿರುತ್ತಾರೆ. ಆದರೆ ಕೆಲವು ಗಿರಣಿಗಳು ಈ ವರದಿಯನ್ನು ಆಕ್ಷೇಪಿಸಿರುವುದರಿಂದ ಮತ್ತು ಈ ಸಂಸ್ಥೆಯು ನೀಡಿರುವ ವರದಿಯು ಸರಿಯಿಲ್ಲ ಎಂಬ ಕಾರಣದಿಂದಾಗಿ ಈ ಗಿರಣಿಯೂ ಸೇರಿ 3 ಗಿರಣಿಗಳ ಅಂದರೆ ರಾಯಚೂರು, ಮಲಪ್ರಭಾ ಮತ್ತು ತುಂಗಭದ್ರ ಸಹಕಾರಿ ನೂಲಿನ ಗಿರಣಿಗಳ ಕಾರ್ಯನಿರ್ವಹಣೆ ಬಗ್ಗೆ ಅಧ್ಯಯನವನ್ನು ದಕ್ಷಿಣ ಭಾರತೀಯ ಜವಳಿ ಸಂಶೋಧನಾ ಸಂಸ್ಥೆ. ಕೊಯಮತ್ತೂರು (ಸಿಟ್ರಾ) ಇವರಿಗೆ ವಹಿಸಿ, ವರದಿಯನ್ನು ಪಡೆಯಲು ಯೋಜಿಸಿದೆ. ಈ ಉದ್ದೇಶಕ್ಕಾಗಿ ಹಣ ಬಿಡುಗಡೆ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಈ) ಹೌದು.

ಉ) ನಷ್ಟಕ್ಕೆ ಸಂಬಂಧಪಟ್ಟಂತೆ ಸಂಬಂಧಿಸಿದ ಆಡಳಿತ ಮಂಡಳಿಯ ನಿರ್ದೇಶಕರುಗಳು, ವ್ಯವಸ್ಥಾಪಕ ನಿರ್ದೇಶಕರುಗಳು ಹಾಗೂ ಗಿರಣಿಯ ಕೆಲವು

ಸಿಬ್ಬಂದಿಯ ಮೇಲೆ 49 ಸರ್ ಚಾರ್ಜ್ ಪ್ರಕರಣಗಳನ್ನು ದಾಖಲಿಸಿಕೊಂಡಿದ್ದು ಅವುಗಳು ವಿಚಾರಣಾ ಹಂತದಲ್ಲಿರುತ್ತದೆ.

505(460) : ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002 ಮತ್ತು 2003ರಲ್ಲಿ ಮುಂಗಾರು ವಿಮಾ ಯೋಜನೆಗೆ ಧಾರವಾಡ ಜಿಲ್ಲೆಯಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ;

ಆ) ಪ್ರಸ್ತುತ ಸಾಲಿನಲ್ಲಿ ವಿಮಾ ಕಂತು ತುಂಬಿದರೂ ಸಹಿತ, ಕೆಲವೊಂದು ರೈತರಿಗೆ ವಿಮಾ ಸೌಲಭ್ಯ ದೊರೆಯದಿರುವುದು ಮತ್ತು ಇದರಲ್ಲಿ ವ್ಯತ್ಯಾಸವಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಯಾವ ಕ್ರಮ ತೆಗೆದುಕೊಳ್ಳಲಾಗಿದೆ; ಬಿಡುಗೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು;

ಇ) ಅನ್ಯಾಯವಾದ ರೈತರಿಗೆ ವಿಮಾ ಹಣವನ್ನು ಯಾವಾಗ ಬಿಡುಗಡೆ ಮಾಡುವಿರಿ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಧಾರವಾಡ ಜಿಲ್ಲೆಗೆ 2002ರ ಮುಂಗಾರು ಹಂಗಾಮಿನಲ್ಲಿ ರೂ. 1072.36 ಲಕ್ಷ ಮತ್ತು 2003ರ ಮುಂಗಾರು ಹಂಗಾಮಿನಲ್ಲಿ ರೂ. 10415.58 ಲಕ್ಷ ಬೆಳೆ ವಿಮಾ ನಷ್ಟ ಪರಿಹಾರವನ್ನು ಬಿಡುಗಡೆ ಮಾಡಲಾಗಿದೆ.

ಆ) ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಒಂದು ಅಧಿಸೂಚಿತ ಪ್ರದೇಶದಲ್ಲಿ ವಾಸ್ತವಿಕ ಇಳುವರಿಯನ್ನು ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಆ ಪ್ರದೇಶದಲ್ಲಿ ಆ ಬೆಳೆಗೆ ವಿಮೆ ಮಾಡಿಸಿದ ರೈತರೆಲ್ಲರಿಗೂ ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ. ಅಂತಹ ರೈತರ 2003ರ ಮುಂಗಾರು ಹಂಗಾಮಿನಲ್ಲಿ ಬೆಲೆ ವಿಮಾ ನಷ್ಟ ಪರಿಹಾರ ಈಗಾಗಲೇ ಇತ್ಯರ್ಥ ಪಡಿಸಲಾಗುತ್ತದೆ. 2003ರ ಮುಂಗಾರು ಹಂಗಾಮಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಬೆಳೆ ಸಾಲ ಪಡೆಯದ ರೈತರ ಬೆಳೆ ವಿಮಾ ನಷ್ಟ ಪರಿಹಾರವನ್ನು ರೈತವಾರು ವಿವರವಾದ ತನಿಖೆಯನ್ನು ಜಮೀನಿನಲ್ಲಿ ಬೆಳೆ ಇದ್ದಾಗಲೇ ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು ತೆಗೆದುಕೊಂಡಿತ್ತು. ತನಿಖೆಯ ಪ್ರಕಾರ ವಿಮೆಗೆ ಒಳಪಟ್ಟ ರೈತರ ಕ್ಷೇತ್ರ ಬಿತ್ತನೆಯಾದ ಕ್ಷೇತ್ರಕ್ಕಿಂತ ಕಡಿಮೆ ಇದ್ದರೆ, ಬಿತ್ತನೆ ಕ್ಷೇತ್ರಕ್ಕೆ ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಿರುತ್ತದೆ. ವಿಮೆಗೆ ಒಳಪಟ್ಟ ಬೆಳೆಯು ಬಿತ್ತನೆಯಾಗದೇ ಇದ್ದರೆ, ಅಂತಹ ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಿರುವುದಿಲ್ಲ.

ತನಿಖಾ ಸಮಯದಲ್ಲಿ ಧಾರವಾಡ ಜಿಲ್ಲೆಯಲ್ಲಿ 4399 ರೈತರ ದಾಖಲಾತಿಗಳನ್ನು ಕೆಲವು ಬ್ಯಾಂಕುಗಳು ಒದಗಿಸದ ಕಾರಣ ಇವರ ಬೆಳೆ ವಿಮಾ ನಷ್ಟ ಪರಿಹಾರವನ್ನು ತಡೆ ಹಿಡಿಯಲಾಗಿದೆ. ಈಗ ಬ್ಯಾಂಕುಗಳು ದಾಖಲಾತಿಗಳನ್ನು